ದಿನಾಂಕಃ **14/08/2025** ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಸತ್ಯಪ್ರತಿಜ್ಞೆ ಬೋಧಿಸಲಾಯಿತು.

**<u>ಪಾಟೀ ಸವಾಲು ಆರೋಪಿ ಪರ ಶ್ರೀ ಯು.ಎನ್.ಜಿ. ವಕೀಲರಿಂದಃ-</u>**

27. ನಿಪಿ-1 ವರದಿ ನೀಡುವ 15 ದಿನಗಳ ಮುಂಚೆ ನಾನು ಆರೋಪಿಯ ಆಸ್ತಿಗಳಿಗೆ ಹೋಗಿ ಪರಿಶೀಲಿಸಿದ್ದೇನೆ, ಆದರೆ ದಾಖಲೆ ಸಂಗ್ರಹಿಸಿಲ್ಲ. ನಾನು ಆರೋಪಿಯನ್ನು ಭೇಟಿಯಾಗಿಲ್ಲ ಮತ್ತು ವಿಚಾರಿಸಿಲ್ಲ. ಆರೋಪಿಯ ಸ್ವಂತ ಊರು ಮತ್ತು ಸ್ವಂತ ಊರಿನಲ್ಲಿರುವ ಆಸ್ತಿ ಕುರಿತು ನಾನು ವಿಚಾರಿಸಿಲ್ಲ. ಎಲ್ಲ ಲೋಕನೌಕರರಿಗೆ ಸಾಮಾನ್ಯವಾಗಿ ಪಿತ್ರಾರ್ಜಿತ ಆಸ್ತಿ ಇರುತ್ತದೆ ಎನ್ನುವುದು ಸುಳ್ಳು. ಆರೋಪಿ ಸ್ವಂತ ಊರಿನಲ್ಲಿ ಜಮೀನು ಮತ್ತು ಮನೆ ಇದೆ ಎನ್ನುವುದು ಸುಳ್ಳು. ಆರೋಪಿ ಹೆಂಡತಿಯು ಸವಣೂರು ತಾಲೂಕಿನ ನರೇಗಲ್ಲ ಗ್ರಾಮದವರು. ಸವಣೂರು ತಾಲೂಕಿನಲ್ಲಿ ನರೇಗಲ್ಲ ಎನ್ನುವ ಗ್ರಾಮ ಇಲ್ಲ ಎನ್ನುವುದು ಸುಳ್ಳು.

28. ಆರೋಪಿಯ ತಂದೆ ತಾಯಿ ವ್ಯವಸಾಯ ಮಾಡುತ್ತಿದ್ದರು. ಆರೋಪಿಯ ತಂದೆ ತಾಯಿ ಹಣ್ಣಿನ ವ್ಯಾಪಾರ ಮಾಡುತ್ತಿದ್ದರು ಎನ್ನುವ ಕುರಿತು ಮಾಹಿತಿ ಇಲ್ಲ. ನನ್ನ ಮುಖ್ಯ ವಿಚಾರಣೆಯ 6 ನೇ ಖಂಡಿಕೆಯಲ್ಲಿ ಹೇಳಿದ ಆಸ್ತಿಯನ್ನು ಆರೋಪಿಯ ತಂದೆ ತಾಯಿ ತಮ್ಮ ಸ್ವಂತ ಆದಾಯದಿಂದ ಖರೀದಿ ಮಾಡಿದ್ದಾರೆ ಎನ್ನುವುದು ಸುಳ್ಳು. ಸದರಿ ಮನೆಯನ್ನು ನವೀಕರಿಸಿಲ್ಲ ಎನ್ನುವುದು ಸುಳ್ಳು.

29. ಆರೋಪಿಯ ಮಗಳು ರುಕ್ಸಾನಾಭಾನು ಎನ್ನುವವರು 2006 ರಿಂದ ಶಿಕ್ಷಕಿಯಾಗಿ ಕೆಲಸ ಮಾಡುತ್ತಿದ್ದ ಬಗ್ಗೆ ಮಾಹಿತಿ ಇಲ್ಲ. ನಿಪಿ-1 ವರದಿ ನೀಡುವಾಗ ಅವರು ಹಾವೇರಿಯ ವಾಣಿಜ್ಯ ತೆರಿಗೆ ಅಧಿಕಾರಿಯಾಗಿ ಕೆಲಸ ಮಾಡುತ್ತಿದ್ದರು ಎನ್ನುವುದು ಗೊತ್ತಿಲ್ಲ. ನಕ್ಷಿತಾ ಮತ್ತು ಅಮಿನಾ ಎನ್ನುವವರು ಆರೋಪಿಯ ಮಕ್ಕಳಲ್ಲ ಎಂದರೆ ನನಗೆ ಹಾಗೆಯೇ ಬಾತ್ಮಿ ಬಂದಿತ್ತು. ರುಕ್ಸಾನಾಭಾನು ಎನ್ನುವವರ ಮದುವೆ ಆಗಿದೆ. ರುಕ್ಸಾನಾಭಾನು ಮನೆ ಸಂಖ್ಯೆ 1555/ಬಿ ಯಲ್ಲಿ ವಾಸ ಮಾಡುತ್ತಿದ್ದರು ಎನ್ನುವುದು ನಿಜ.

30. ಆರೋಪಿಯ ತಂದೆ ತೀರಿಕೊಂಡ ನಂತರ ಆಸ್ತಿ ಸಂಖ್ಯೆ 1555/ಸಿ ಆರೋಪಿಗೆ ಬಂತು ಎನ್ನುವುದು ಗೊತ್ತಿಲ್ಲ. ವರದಿ ಕಾಲಕ್ಕೆ ಆರೋಪಿಯ ಮಗ ಜಮೀನಿನ ಮತ್ತು ಇತರ ವ್ಯವಹಾರದ ಮೂಲಕ ಗಳಿಕೆ ಹೊಂದಿದ್ದ ಎನ್ನುವುದು ಸುಳ್ಳು. ಆರೋಪಿಯು ತನ್ನ ಮಗನ ಹೆಸರಿನಲ್ಲಿ ಯಾವುದೇ ಆಸ್ತಿ ಖರೀದಿ ಮಾಡಿಲ್ಲ ಎನ್ನುವುದು ಸುಳ್ಳು.

31. ಆರೋಪಿಯ ಮಾವ ಎ.ಎಂ.ನದಾಫ ಎನ್ನುವವರ ಹೆಸರಿನಲ್ಲಿರುವ ಆಸ್ತಿಯನ್ನು ತೋರಿಸಿ ವರದಿ ಸಲ್ಲಿಸಿದ್ದೇನೆ ಎನ್ನುವುದು ನಿಜ. ಸದರಿ ಆಸ್ತಿ ಆರೋಪಿಯ ಮಾವನಿಗೆ ಸಂಬಂಧಿಸಿದ್ದು ಎನ್ನುವುದು ಸುಳ್ಳು. ಆರೋಪಿಯು ತನ್ನ ಹೆಂಡತಿಯ ಹೆಸರಿನಲ್ಲಿ ದಿನಾಂಕಃ07/06/1997 ರಂದು ಆಸ್ತಿ ಖರೀದಿ ಮಾಡಿಲ್ಲ ಎನ್ನುವುದು ಸುಳ್ಳು. ಆರೋಪಿಗೂ

ಹಾಗೂ ಆರೋಪಿ ಮಾವನ ಆಸ್ತಿಗೂ ಸಂಬಂಧ ಇಲ್ಲ ಎನ್ನುವುದು ಸುಳ್ಳು. ಇಬ್ಬರು ಸೇರಿ ಖರೀದಿಸಿದ ಆಸ್ತಿಯನ್ನು ನಂತರ 2 ಭಾಗ ಮಾಡಬೇಕಾಗುತ್ತದೆ ಎನ್ನುವುದು ಸುಳ್ಳು. ಅರ್ಧ ಆಸ್ತಿ ಬದಲಾಗಿ ಸಂಪೂರ್ಣ ಆಸ್ತಿಯನ್ನು ತೋರಿಸಿ ವರದಿ ಸಲ್ಲಿಸಿದ್ದೇನೆ ಎನ್ನುವುದು ಸುಳ್ಳು.

32. ಆಸ್ತಿ ಸಿಟಿಎಸ್ ಸಂಖ್ಯೆ 1555/ಬಿ, 1539, ಸರ್ವೆ ನಂ.99/4/ಎ 1, 16/1, 8/1, 93/3 ಮತ್ತು ಇತರ ಆಸ್ತಿಗಳನ್ನು ಹಿರಿಯರ ಆಸ್ತಿ ಉತ್ಪನ್ನದ ಆದಾಯದ ಮೂಲಕ ಖರೀದಿ ಮಾಡಲಾಗಿದೆ ಎನ್ನುವುದು ಸುಳ್ಳು.

33. ಆಸ್ತಿ ಸಿಟಿಎಸ್ ಸಂಖ್ಯೆ 1530 ಎ, 1531, 1532, 1533, 1534, 1540 ಮತ್ತು 1541 ಆಸ್ತಿಗಳನ್ನು ಆರೋಪಿಯ ಅಳಿಯನ ಆಸ್ತಿಗಳು ಎನ್ನುವುದು ಸುಳ್ಳು.

34. ಆರೋಪಿ ಹೆಂಡತಿಯ ಹೆಸರಿನಲ್ಲಿರುವ ಆಸ್ತಿಗಳನ್ನು ಆರೋಪಿ ಹೆಂಡತಿಯ ತಮ್ಮ ಖರೀದಿಸಿಕೊಟ್ಟಿದ್ದ ಎನ್ನುವುದು ಸುಳ್ಳು. ಆಸ್ತಿ ಸಿಟಿಎಸ್ ಸಂಖ್ಯೆ 898 ಎ 4 ಹಿರಿಯರ ಆಸ್ತಿ ಉತ್ಪನ್ನದ ಆದಾಯದ ಮೂಲಕ ಖರೀದಿ ಮಾಡಲಾಗಿದೆ ಎನ್ನುವುದು ಸುಳ್ಳು. ಆಸ್ತಿ ಸರ್ವೆ ನಂ.64/1 ಹಿರಿಯರ ಆಸ್ತಿ ಉತ್ಪನ್ನದ ಆದಾಯದ ಮೂಲಕ ಆರೋಪಿಯ ಹೆಂಡತಿಯ ಹೆಸರಿನಲ್ಲಿ ಖರೀದಿ ಮಾಡಲಾಗಿದೆ ಎನ್ನುವುದು ಸುಳ್ಳು.

35. ನನ್ನ ವರದಿಯಲ್ಲಿ ನಮೂದು ಮಾಡಿದ ಯಾವುದೇ ಆಸ್ತಿಯನ್ನು ಆರೋಪಿ ಬೇರೆ ಯಾವುದೇ ಆದಾಯದ ಮೂಲಕ ಖರೀದಿಸಿದ್ದಲ್ಲ ಎನ್ನುವುದು ಸುಳ್ಳು. ಆರೋಪಿಗೆ ಹಿರಿಯರ ಆಸ್ತಿ ಆದಾಯ, ತಂದೆ ತಾಯಿಗಳ ವ್ಯಾಪಾರದ ಆದಾಯ ಪ್ರತಿಯೊಂದು ಗೊತ್ತಿದ್ದರೂ, ಆರೋಪಿಗೆ ಆಗದವರ ಮಾತು ಕೇಳಿ ಸುಳ್ಳು ವರದಿ ಸಲ್ಲಿಸಿದ್ದೇನೆ ಎನ್ನುವುದು ಸುಳ್ಳು.

36. ಆರೋಪಿ ಮಗನ ಹೆಸರಿನಲ್ಲಿದ್ದ ಬೈಕ ಸಂಖ್ಯೆ ಕೆಎ 27 ಆರ್ 808 ಹಳೆಯ ವಾಹನವಾಗಿದ್ದು ಅದರ ಮೌಲ್ಯ ತಪ್ಪಾಗಿ ತೋರಿಸಿದ್ದೇನೆ ಎನ್ನುವುದು ಸುಳ್ಳು. ವಾಹನ ಸಂಖ್ಯೆ ಕೆಎ 27 ಎಸ್ 9100 ಹಳೆ ವಾಹನದ ಮೌಲ್ಯವನ್ನು ಹೊಸ ವಾಹನವನ್ನಾಗಿ ತೋರಿಸಿದ್ದೇನೆ ಎನ್ನುವುದು ಸುಳ್ಳು. ಸದರಿ ವಾಹನಗಳ ಖರೀದಿ ದಿನಾಂಕವನ್ನು ನೋಂದಣಿ ದಿನಾಂಕದ ಮೂಲಕ ಸಂಗ್ರಹಿಸಿದ್ದೇನೆ.

37. ಕಾರು ಸಂಖ್ಯೆ ಕೆಎ-27/ಸಿ-2239 ಹಳೆಯ ವಾಹನವಾಗಿದ್ದು ಹೆಚ್ಚು ಮೌಲ್ಯ ತೋರಿಸಿದ್ದೇನೆ ಎನ್ನುವುದು ಸುಳ್ಳು. ಆರೋಪಿಯ ತಂದೆ ಹಳೆಯ ಟ್ರ್ಯಾಕ್ಟರ ಮಾರಿ ಟ್ರ್ಯಾಕ್ಟರ ಸಂಖ್ಯೆ ಕೆಎ 27 ಬಿ 7394/95 ಖರೀದಿ ಮಾಡಿದ್ದರು ಎನ್ನುವುದು ಸುಳ್ಳು. ಟ್ರ್ಯಾಕ್ಟರ ಸಂಖ್ಯೆ ಕೆಎ 27 ಟಿ 6715 ನ್ನು ಹಿರಿಯರ ಆಸ್ತಿಯ ಆದಾಯದ ಮೂಲಕ ಖರೀದಿಸಿದ್ದು, ಟ್ರ್ಯಾಕ್ಟರ ಕೆಟ್ಟು ಹೋಗಿತ್ತು ಎನ್ನುವುದು ಸುಳ್ಳು.

38. ಮನೆಯ ಸಿಟಿಎಸ್ ಸಂಖ್ಯೆ 1555/ಬಿ ಯನ್ನು ನವೀಕರಿಸಿಲ್ಲ ಎನ್ನುವುದು ಸುಳ್ಳು. ಮನೆಯ ನವೀಕರಣದ ವಿವರಗಳನ್ನು ನನ್ನ ವರದಿಯಲ್ಲಿ ನಮೂದು ಮಾಡಿಲ್ಲ ಎನ್ನುವುದು ನಿಜ. ಮನೆಯಲ್ಲಿದ್ದ ಪೀಠೋಪಕರಣ ಹಿಂದಿನಿಂದ ಬಂದಿದ್ದವು ಎನ್ನುವುದು ಸುಳ್ಳು. ಮದುವೆ ಕಾಲಕ್ಕೆ

ಹೆಂಗಸರಿಗೆ ತವರುಮನೆಯವರು ಆಭರಣ ಕೊಡುತ್ತಾರೆ ಎಂದರೆ ಅವರವರ ಸಂಪ್ರದಾಯಕ್ಕೆ ಬಿಟ್ಟಿದ್ದು. ಸಿಟಿಎಸ್ ಸಂಖ್ಯೆ 1539 ರ ಕಟ್ಟಡದಲ್ಲಿ ಹೊಸದಾಗಿ ಯಾವುದೇ ಮಳಿಗೆ ನಿರ್ಮಿಸಿಲ್ಲ ಎನ್ನುವುದು ಸುಳ್ಳು.

39. ಮೊಮ್ಮಕ್ಕಳ ಕಾರ್ಯಕ್ರಮಗಳಿಗೆ ಅಜ್ಜ-ಅಜ್ಜಿ ಉಡುಗೊರೆ ಕೊಡುತ್ತಾರೆ ಎನ್ನುವುದು ನಿಜ. ರೈತರ ಮನೆಯಲ್ಲಿ ಎತ್ತು, ದನ ಇರುತ್ತವೆ ಎನ್ನುವುದು ನಿಜ. ಮನೆಯಲ್ಲಿ ಜನಿಸಿದ ಜಾನುವಾರುಗಳ ಮೌಲ್ಯ ಪರಿಗಣಿಸಲು ಬರುವುದಿಲ್ಲ ಎನ್ನುವುದು ಸುಳ್ಳು. ಅಂತಹ ಜಾನುವಾರುಗಳನ್ನು ಪರಿಗಣಿಸಿದ್ದೇನೆ ಎನ್ನುವುದು ಸುಳ್ಳು.

40. ಬೇರೆಯವರ ಆಸ್ತಿಗಳನ್ನು ಸೇರಿಸಿ, ಆಸ್ತಿಗಳ ಮೌಲ್ಯ ಹೆಚ್ಚು ತೋರಿಸಿ ಸುಳ್ಳು ವರದಿ ಸಲ್ಲಿಸಿದ್ದೇನೆ ಎನ್ನುವುದು ಸುಳ್ಳು. ಒಂದೇ ಆಸ್ತಿಯ ಮೌಲ್ಯ ಎರಡೆರಡು ಬಾರಿ ತೋರಿಸಿದ್ದೇನೆ ಎನ್ನುವುದು ಸುಳ್ಳು. ಸಿಟಿಎಸ್ ಸಂಖ್ಯೆ 1555 ಬಿ ಮನೆಯ ನವೀಕರಣದ ಬಗ್ಗೆ ಸುಳ್ಳು ವರದಿ ಕೊಟ್ಟಿದ್ದೇನೆ ಎನ್ನುವುದು ಸುಳ್ಳು. ಆರೋಪಿಯ ಒಬ್ಬ ಮಗಳು ನರ್ಸಿಂಗ, ಇನ್ನೊಬ್ಬಳು ಡಿ.ಎಡ್, ಮತ್ತೊಬ್ಬ ಮಗಳು ಎಸ್.ಎಸ್.ಎಲ್.ಸಿ. ಓದಿರುವ ಕುರಿತು ಹಾಗೂ ಒಬ್ಬಳು ಶಿಕ್ಷಕಿಯಾಗಿರುವ ಬಗ್ಗೆ ಮತ್ತು ಮಗ ಎಸ್.ಎಸ್.ಎಲ್.ಸಿ ಓದಿರುವ ಕುರಿತು ಮಾಹಿತಿ ಸಂಗ್ರಹಿಸಿದ್ದೇನೆ. ಸದರಿಯವರು ಯಾವ ಸಂಸ್ಥೆ/ಶಾಲೆಗಳಲ್ಲಿ ಓದಿದ್ದಾರೆ ಎಂದು ಮಾಹಿತಿ ಸಂಗ್ರಹಿಸಿಲ್ಲ.

41. ವಾಹನಗಳು ಓಡುವ ಸ್ಥಿತಿಯಲ್ಲಿ ಇಲ್ಲದ್ದರಿಂದ ಇಂಧನಕ್ಕಾಗಿ ನಾನು ತೋರಿಸಿದಂತೆ ಖರ್ಚು ಮಾಡುವ ಅವಶ್ಯಕತೆ ಇರಲಿಲ್ಲ ಎನ್ನುವುದು ಸುಳ್ಳು. ಪ್ರಕರಣಕ್ಕೆ ಅನುಕೂಲ ವಾಗುವಂತೆ ಖರ್ಚು ವೆಚ್ಚ ತೋರಿಸಿದ್ದೇನೆ ಎನ್ನುವುದು ಸುಳ್ಳು. ರೈತರು ದವಸ ಧಾನ್ಯ ಖರೀದಿ ಮಾಡುವ ಅವಶ್ಯಕತೆ ಇರುವುದಿಲ್ಲ ಎನ್ನುವುದು ಸುಳ್ಳು. ಕಟ್ಟಡದ ಮಳಿಗೆಗಳಿಂದ ಬರುತ್ತಿದ್ದ ಬಾಡಿಗೆಯನ್ನು ಕಡಿಮೆ ತೋರಿಸಿದ್ದೇನೆ ಎನ್ನುವುದು ಸುಳ್ಳು.

42. ಆರೋಪಿಗೆ ಇದ್ದ ನೀರಾವರಿ ಜಮೀನುಗಳ ಹಾಗೂ ಆರೋಪಿ ತಂದೆಯ ಮತ್ತು ಇತರರ ಆದಾಯವನ್ನು ನಾನು ಪರಿಗಣಿಸಿಲ್ಲ ಎನ್ನುವುದು ಸುಳ್ಳು. ಆರೋಪಿಯ ಮಗ ಜಮೀನು ಗಳನ್ನು ನಿವೇಶನವನ್ನಾಗಿ ಪರಿವರ್ತಿಸಿ ಮಾರಿದಾಗ ಬಂದ ಆದಾಯವನ್ನು ನಾನು ಪರಿಗಣಿಸಿಲ್ಲ ಎನ್ನುವುದು ಸುಳ್ಳು. ನಿಪಿ-1 ನ್ನು ಸೃಷ್ಟಿ ಮಾಡಿದ್ದೇನೆ ಎನ್ನುವುದು ಸುಳ್ಳು. ಆರೋಪಿಗೂ ನಿಪಿ-1 ರ ಆಸ್ತಿ ಕ್ರಮ ಸಂಖ್ಯೆ 1 ಮತ್ತು 10 ಕ್ಕೂ ಸಂಬಂಧ ಇಲ್ಲ ಎನ್ನುವುದು ಸುಳ್ಳು. ನಿಪಿ-1 ರ ಕ್ರಮ ಸಂಖ್ಯೆ 18, 20 ಮತ್ತು 22 ರಲ್ಲಿ ಹೆಚ್ಚಿನ ಖರ್ಚು ತೋರಿಸಿದ್ದೇನೆ ಎನ್ನುವುದು ಸುಳ್ಳು.

43. ಕಟ್ಟಡದ ಮೌಲ್ಯ ನಿರ್ಧರಿಸಲು ಲೋಕೋಪಯೋಗಿ ಇಲಾಖೆಯ ವರದಿ ಪಡೆದಿಲ್ಲ. ವಾಹನಗಳ ಮೌಲ್ಯ ನಿರ್ಧರಿಸಲು ಆರ್.ಟಿ.ಓ. ಕಾರ್ಯಲಯದಿಂದ ವರದಿ ಪಡೆದಿಲ್ಲ. ಜಮೀನಿನ ಆದಾಯದ ಕುರಿತು ಕೃಷಿ ಮತ್ತು ತೋಟಗಾರಿಕೆ ಇಲಾಖೆಯ ವರದಿ ಪಡೆದಿಲ್ಲ.

44. ವರದಿಯನ್ನು ದಾವಣಗೆರೆಯಲ್ಲಿ ತಯಾರಿಸಿದ್ದೇನೆ. ವರದಿ ತಯಾರಿಸುವ ಕಾಲಕ್ಕೆ ನಾನು ಹಾವೇರಿ ಲೋಕಾಯುಕ್ತ ಕಾರ್ಯಾಲಯದ ಅಧಿಕಾರಿ ಆಗಿರಲಿಲ್ಲ ಎನ್ನುವುದು ನಿಜ. ಡಿವೈ.ಎಸ್.ಪಿ.ಯವರು ನನ್ನ ಸಮಕ್ಷಮ ಸಹಿ ಮಾಡಿಲ್ಲ ಎನ್ನುವುದು ಸುಳ್ಳು. ನಿಪಿ-1 ನ್ನು ಸಿಬ್ಬಂದಿ ಸಹಾಯದಿಂದ ತಯಾರಿಸಿದ್ದೇನೆ. ನಿಪಿ-2 ರಲ್ಲಿ ಎಂ.ಬಿ.ಪಾಟೀಲ ಎನ್ನುವ ಡಿವೈ.ಎಸ್.ಪಿ.ಯವರ ಸಹಿ ಅಲ್ಲ ಎನ್ನುವುದು ಸುಳ್ಳು. ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎನ್ನುವುದು ಸುಳ್ಳು.

**ಮರುವಿಚಾರಣೆಃ** ಇಲ್ಲ.

***(***ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇಲೆ ಬೆರಳಚ್ಚು ಮಾಡಲಾಯಿತು.***)***

ಓ ಹೇ ಕೇ ಸರಿ ಇದೆ

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಹಾಗೂ ವಿಶೇಷ ನ್ಯಾಯಾಧೀಶರು, ಹಾವೇರಿ.